**37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

ಸಿ.ಸಿ. ನಂ. **5554/2015**

ಪ್ರಾ.ಸಃ **8** ಚಾ.ಸಃ **21**

| | |
|---|---|
| ಸಾಕ್ಷಿದಾರರ ಹೆಸರು | ವಿಮಲ |
| ತಂದೆಯ/ಗಂಡನ ಹೆಸರು | ಕೃಷ್ಣಮೂರ್ತಿ |
| ವಯಸ್ಸು | 34 ವರ್ಷ |
| ಉದ್ಯೋಗ | ಗೃಹಿಣಿ |
| ವಿಳಾಸ | ಬಿನ್ನಿಪೇಟೆ,ಬೆಂಗಳೂರು. |
| ಪ್ರ ವ ಬೋ ದಿನಾಂಕ | 28.11.2022 |

ಮುಖ್ಯ ವಿಚಾರಣೆಃ ಹಿ.ಸ.ಸ. ಅ ರವರಿಂದಃ

ನಾನು ಬಿ.ಎ ಪದವಿಧರಳಾಗಿದ್ದು, ಇದರ ಜೊತೆಗೆ ಬಸವನಗುಡಿಯ ಸಾಯಿರಾಂ ಕಂಪ್ಯೂಟರ್ ಸೆಂಟರ್ ನಲ್ಲಿ ಕಂಪ್ಯೂಟರ್ ತರಬೇತಿಯನ್ನು ಸಹ ಪಡೆದುಕೊಂಡಿದ್ದೆ. ಈಗಾಗಿ ಸಾಯಿರಾಂ ಕಂಪ್ಯೂಟರ್ ಮಾಲೀಕರ ಬಳಿ ನನ್ನ ಬಯೋಡೆಟಾವನ್ನು ಕೊಟ್ಟು ಯಾರಾದರೂ ಕಂಪ್ಯೂಟರ್ ಆಪರೇಟರ್ ಗಳು ಕೆಲಸಕ್ಕೆ ಬೇಕಾಗಿದ್ದಾರೆ ಎಂದು ತಿಳಿಸಿದರೆ ನನಗೆ ಹೇಳುವಂತೆ ಬಂದಿದ್ದೇನು. ಈಗಿರುವಾಗ 15.04.2014 ರಂದು ಸಾಯಿರಾಂ ಕಂಪ್ಯೂಟರ್ ಸೆಂಟರ್ ಮಾಲೀಕರು ನನಗೆ ಪೋನ್ ಮಾಡಿ, ಎನ್.ಆರ್ ಕಾಲೋನಿ ಯಲ್ಲಿರುವ ವಿದ್ಯಾಭಾರತಿ ಫೌಂಡೇಶನ್ ನಲ್ಲಿ ಕಂಪ್ಯೂಟರ್ ಆಟರೇಟರ್ ಗಳು ಬೇಕಾಗಿದ್ದಾರೆಂದು, ನಿನಗೆ ಆಸಕ್ತಿ ಇದ್ದರೆ ಅಲ್ಲಿಗೆ ಕೆಲಸಕ್ಕೆ ಹೋಗುವಂತೆ ಅರುಣ್ ಕುಮಾರ್ ಎಂಬುವರು ಪೋನ್ ನಂಬರ್ ಮತ್ತು ವಿಳಾಸವನ್ನು ಕೊಟ್ಟಿರುತ್ತಾರೆ.

ನಾನು ದಿ. 18.04.2014 ರಂದು ನಾನು ವಿದ್ಯಾಭಾರತಿ ಫೌಂಡೇಶನ್ ನಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ಅಲ್ಲಿನ ಮಾಲೀಕರಾದ ಅರುಣ್ ಕುಮಾರ್ ಎಂಬುವರು ನನಗೆ ನಿಮ್ಮ ಹೆಸರಿನಲ್ಲಿ ಒಂದ ಸೀಮ್ ಕಾರ್ಡ್ ಖರೀದಿಸುವಂತೆ ತಿಳಿಸಿದ್ದರು. ಅದರಂತೆ ನಾನು ನನ್ನ ಹೆಸರಿನಲ್ಲಿ ಸೀಮ್ ಕಾರ್ಡ್ ಖರೀದಿಸಿದ್ದೆನು. ವಿದ್ಯಾಭಾರತಿ ಫೌಂಡೇಶನ್ ರವರು ಸಾರ್ವಜನಿಕರಿಗೆ ಬೆಂಗಳೂರಿನಿಂದ ಶಿರಡಿ ಗೆ ವಿಶೇಷ ರೈಲಿನಲ್ಲಿ ಯಾತ್ರೆಗೆ ಕರೆದುಕೊಂಡು ಹೋಗುವುದಾಗಿ ಪತ್ರಿಕಾ ಪ್ರಕಟಣೆ ಮತ್ತು ಪಾಂಪ್ಲೆಟ್ ಗಳ ಮೂಲಕ ಪ್ರಚಾರ ಮಾಡಿದ್ದು, ಅದರಂತೆ ಯಾತ್ರೆ ನಿಗದಿ ಪಡಿಸಿದ ದಿನಾಂಕದಂದು ಯಾತ್ರೆಗೆ ಹೋಗಲು ಬಯಸುವ ಯಾತ್ರಾರ್ಥಿ ಗಳು ಪೋನ್ ಮಾಡಿದಾಗ, ಅವರ ಡಿಟೇಲ್ಸ್ ಗಳನ್ನು ಪಡೆದುಕೊಳ್ಳುವುದು ಮತ್ತು ಅವರಿಗೆ ಯಾತ್ರೆಯ

ವಿವರಗಳನ್ನು ನೀಡುವ ಕೆಲಸವನ್ನು ನಾವು ಮಾಡಬೇಕಿತ್ತು. ನನ್ನ ಜೊತೆ ಸದರಿ ಕಚೇರಿಯಲ್ಲಿ ರಂಜಿನಿ ಮತ್ತು ಪದ್ಮಿನಿ ಎಂಬುವರು ಕೆಲಸ ಮಾಡುತ್ತಿದ್ದರು. ಯಾತ್ರೆಗೆ ಹೋಗುವ ಎರಡು ದಿನ ಮೊದಲು ನಾನು ಕೆಲಸವನ್ನು ಬಿಟ್ಟಿರುತ್ತೇನೆ. ಇದಾದ ಸ್ವಲ್ಪ ದಿನಗಳ ನಂತರ ಪೊಲೀಸರು ನನಗೆ ಕರೆ ಮಾಡಿದ್ದರು. ಅರುಣ್ ಕುಮಾರ್ ರವರು ಶಿರಡಿ ಯಾತ್ರೆಗೆ ಎರಡೂ ಕಡೆಯಿಂದ ರೈಲ್ವೇ ಟೀಕೇಟ್ ಖರೀದಿಸಿ ಊಟ-ವಸತಿ ವ್ಯವಸ್ಥೆ ಮಾಡಿ ವಾಪಸ್ಸು ಕರೆದುಕೊಂಡು ಬರುವುದಾಗಿ ಹೇಳಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದರು. ಆದರೆ ಶಿರಡಿ ಯಾತ್ರೆಗೆ ಹೋಗುವ ಪ್ರಯಣಿಕರಿಗೆ ವಿದ್ಯಾಭಾರತಿ ಸಂಸ್ಥೆ ಮಾಲೀಕರು ಅರುಣ್ ಕುಮಾರ್ ರವರು ತಾವು ಹೇಳಿದಂತೆ ಊಟ-ವಸತಿ ರೂಂ ಗಳ ವ್ಯವಸ್ಥೆ ಮಾಡದೇ ಯಾತ್ರಾರ್ಥಿಗಳಿಗೆ ತೊಂದರೆಯಾಗಿದ್ದ ಬಗ್ಗೆ ನನಗೆ ಗೋತ್ತಾಗಿರುತ್ತದೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಮಾನ್ಯ ಹಿ.ಸ.ಸ.ಅ ರವರಿಂದಃ</u>

ಅರುಣ್ ಕುಮಾರ್ ರವರು ಯಾತ್ರಾರ್ಥಿಗಳಿಂದ ತಲಾ 3,450/- ರೂ. ಗಳನ್ನು ಪಡೆದುಕೊಂಡು ವಿಶೇಷ ರೈಲಿನಲ್ಲಿ ದಿ. 30.05.2014 ರಂದು ಬೆಳಗ್ಗೆ ಬೆಂಗಳೂರಿನಿಂದ ಹೊರಟು ದಿ. 31.05.2014 ರಂದು ಮಧ್ಯಾಹ್ನ ಶಿರಡಿ ತಲುಪಿ ಯಾತ್ರಾರ್ಥಿಗಳಿಗೆ ವಿಶೇಷ ದರ್ಶನ ಮಾಡಿಸಿ, ನಂತರ ಶನಿ ಸಿಗ್ನಾಪುರಕ್ಕೆ ಕರೆದುಕೊಂಡು ಹೋಗಿ, ದೇವರ ದರ್ಶನ ಮಾಡಿಸಿ, ದಿ. 31.05.2014 ರಂದು ರಾತ್ರಿ ವಿಶೇಷ ರೈಲಿನಲ್ಲಿ ಹೊರಟು ದಿ. 01.06.2014 ರಂದು ಮಧ್ಯಾಹ್ನ ಬೆಂಗಳೂರಿಗೆ ಕರೆದುಕೊಂಡು ಬಿಡುವುದಾಗಿ ತಿಳಿಸಿ, ಯಾತ್ರೆಯ ಸಮಯದಲ್ಲಿ ಶುದ್ಧ ಶಾಖಾಹಾರ ಒದಗಿಸುವುದಾಗಿ ತಿಳಿಸಿದ್ದರು ಎಂದರೆ ಸರಿ.

<u>ಪಾಟೀ ಸವಾಲುಃ ಶ್ರೀ ಕೆ.ಎಸ್.ಎನ್ ಆರೋಪಿ ವಕೀಲರಿಂದಃ</u>

ಆರೋಪಿ ಅರುಣ್ ಕುಮಾರ್ ರವರು ತಮ್ಮ ಕಚೇರಿಯಲ್ಲಿ ಕೆಲಸ ಮಾಡುವಂತೆ ನೇರವಾಗಿ ಕರೆ ಮಾಡಿ ನನಗೆ ತಿಳಿಸಿರಲಿಲ್ಲ. ಯಾವುದೇ ಕಚೇರಿಯಲ್ಲಿ ಕೆಲಸ ಮಾಡಬೇಕಾದರೆ ಕಚೇರಿಯಿಂದ ಪೋನ್ ನಂಬರ್ ಕೊಡುತ್ತಾರೆ ಎಂದರೆ ಸರಿ, ಆದರೆ ಆರೋಪಿ ಅರುಣ್ ಕುಮಾರ್ ರವರು ನನ್ನ

ಹೆಸರಿನಲ್ಲಿ ಸೀಮ್ ಕಾರ್ಡ್ ತೆಗೆದುಕೊಳ್ಳುವಂತೆ ತಿಳಿಸಿರುತ್ತಾರೆ. ಸೀಮ್ ಖರೀದಿ ಮಾಡಲು ಯಾವುದೇ ಹಣ ನೀಡಬೇಕಾಗಿರಲಿಲ್ಲ, ಆದರೆ ರೀಚಾರ್ಜ್ ಗೆ 50 ರೂ. ಹಣ ಕೊಡಬೇಕಾಗಿರುತ್ತದೆ, ಅದನ್ನು ಆರೋಪಿ ಕೊಟ್ಟಿರುತ್ತಾರೆ, ಸದರಿ ಸೀಮ್ ನ್ನು ಪೋಲೀಸರು ಪಡೆದುಕೊಂಡಿರುತ್ತಾರೆ. ನಾನು ಸುಮಾರು 500-600 ಜನರ ಕರೆಯನ್ನು ಸ್ವೀಕರಿಸಿರುತ್ತೇನೆ. ಯಾತ್ರೆಗೆ ಎಷ್ಟು ಜನ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿ ಶಿರಡಿ ಯಾತ್ರೆಗೆ ಸರಿಯಾದ ವ್ಯವಸ್ಥೆಗಳನ್ನು ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿ ಶಿರಡಿ ಯಾತ್ರೆಗೆ ಯಾವ ರೀತಿ ವ್ಯವಸ್ಥೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲದೇ ಇದ್ದರೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ